# ಆಹಾ ಸುದ್ದಿ!

★ ಸಸಿತೋಟ

ಹೊಟ್ಟೆನೋವಿನಿಂದ ನರಳುತ್ತಿದ್ದವನಿಗೆ ಶಸ್ತ್ರಚಿಕಿತ್ಸೆ ಮಾಡಿದ ರಷ್ಯಾದ ವೈದ್ಯನೊಬ್ಬ ಸೆರೆಮನೆ ಸೇರಿದ್ದಾನೆ. ಚಿಕಿತ್ಸೆ ಯಶಸ್ವಿಯಾಗಿಯೇ ನಡೆಯಿತು. ನೋವೂ ಕಡಿಮೆಯಾಯಿತು. ಆದರೆ ನೋವಿಗೆ ಕಾರಣವಾದ ವಸ್ತುವನ್ನು ವೈದ್ಯ ತನ್ನಲ್ಲೇ ಇರಿಸಿಕೊಂಡಿದ್ದಕ್ಕೆ 15 ವರ್ಷಗಳ ಸೆರೆವಾಸದ ಶಿಕ್ಷೆ ಅನುಭವಿಸುವ ಸಾಧ್ಯತೆಯೂ ಇದೆಯಂತೆ. ಅಷ್ಟಕ್ಕೂ ಆ ವಸ್ತು 5 ಗ್ರಾಂನಷ್ಟು ಮಾದಕ ದ್ರವ್ಯ ಹೆರಾಯಿನ್ ಪ್ಯಾಕ್. ಬೇರೆ ಕೆಲವು ವೈದ್ಯರು ಕತ್ತರಿ, ಚಾಕು ಒಳಗಿಟ್ಟು ಶಿಕ್ಷೆ ಅನುಭವಿಸಿದ್ದರೆ, ಈತ ಒಳಗಿದ್ದ ವಸ್ತುವನ್ನು ಹೊರಗೆ ತೆಗೆದು ಶಿಕ್ಷೆಗೆ ಒಳಗಾಗಿದ್ದಾನೆ.







ಚೀನಾದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಆತ್ಮಹತ್ಯೆ ಸಂಖ್ಯೆಯೂ ಏರುತ್ತಿದೆ. ಕಳೆದ ಆಗಸ್ಟ್ 14ರಂದು ಬೇರೆ ಬೇರೆ ಕಡೆ ಹಾಡಹಗಲು ಸಾರ್ವಜನಿಕ ಸ್ಥಳಗಳಲ್ಲೇ ಆತ್ಮಹತ್ಯೆಗೆ ಯತ್ನಿಸಿದ ಮೂವರು ಮಹಿಳೆಯರನ್ನು ಪೊಲೀಸರು ಹರಸಾಹಸ ಮಾಡಿ ರಕ್ಷಿಸಿದರು. ಸದ್ದಿಲ್ಲದೆ, ಸುದ್ದಿಯಿಲ್ಲದೆ ಸಾವಿಗೆ ಶರಣಾಗುವವರೆಷ್ಟೋ ಮಂದಿ. ಅದರಲ್ಲೂ ಮಹಿಳೆಯರ ಸಂಖ್ಯೆಯೇ ಜಾಸ್ತಿಯಂತೆ. ಸಾವಿನ ಮನೆಗೆ ಪಯಣಿಸಲು ಸೂಕ್ತ ಪರಿಕರಗಳ ಲಭ್ಯತೆ ಇಲ್ಲದವರು ಸಾರ್ವಜನಿಕವಾಗಿಯೇ ಈ ರೀತಿ ಮೃತ್ಯುವನ್ನು ಆಹ್ವಾನಿಸಿಕೊಳ್ಳುತ್ತಾರೆಂದರೆ ಪರಿಸ್ಥಿತಿಯ ಭೀಕರತೆ ನಡುಕ ಹುಟ್ಟಿಸುತ್ತದೆ.

ಅಮೆರಿಕದ ನಿವೃತ್ತ ಸೇನಾಧಿಕಾರಿ ಬ್ರೆಂಟ್ ಎಂಬಾತ ಕೆರೊಲಿನ ಬೆಟ್ಟದಲ್ಲಿ ಕಟ್ಟಿರುವ 'ಪ್ರಳಯದ ಕೋಟೆಮನೆ'. 2000ದ ಕೊನೆಗೆ ಪ್ರಳಯವಾದರೆ ತಾನು ಹಾಗೂ ತನ್ನ 10 ಮಕ್ಕಳು ಮಾತ್ರ 21ನೇ ಶತಮಾನ ನೋಡಬೇಕು ಎಂಬ ಉದ್ದೇಶದಿಂದ ಅಲ್ಲಿ ಬಂಕರ್ ಮೊದಲಾದವುಗಳನ್ನು ನಿರ್ಮಿಸಿಕೊಂಡಿದ್ದನಂತೆ. ಪ್ರಳಯ ಆಗಲಿಲ್ಲ. ಆದರೂ ಭಯ ಬಿಡಲಿಲ್ಲ. ಅಮೆರಿಕದಲ್ಲಿ ಪದೇ ಪದೇ ಸಂಭವಿಸುವ ಚಂಡಮಾರುತದಲ್ಲಿ ಆಹಾರ ಸಿಗದೇ ಲೂಟಿಕೋರರು ದಾಳಿ ಮಾಡಿದರೆ ತಪ್ಪಿಸಿಕೊಳ್ಳಲೆಂದು ಈ ಮನೆಯನ್ನು ಹಾಗೇ ಇಟ್ಟುಕೊಂಡಿದ್ದಾನಂತೆ. ಎಂತಹ ಮುಂದಾಲೋಚನೆ!



ಮದುವೆಯೆಂದರೆ ಸಂಬಂಧಿಕರ, ಸ್ನೇಹಿತರ ಸಂಭ್ರಮ; ದಿಬ್ಬಣದ ಅಬ್ಬರ. ಆದರೆ ಮಾಸ್ಕೋದಲ್ಲಿ ಆಗತಾನೆ ಮದುವೆಯಾಗಿ ಚರ್ಚ್‌ನಿಂದ ಹೊರಬಿದ್ದ ಜೋಡಿ ಆರಾಮವಾಗಿ ಸೈಕಲ್‌ನಲ್ಲಿ ಪಾರ್ಕ್, ರಸ್ತೆಯನ್ನೆಲ್ಲ ಸುತ್ತಿ ಮನೆಗೆ ನಡೆದರು. ಮೆರವಣಿಗೆಗೆ ಅಲಂಕೃತ ಕಾರು, ಕುದುರೆಗಳ ಹಂಗಿಲ್ಲ, ಖರ್ಚಿಗೆ ಕೈಯಲ್ಲಿ ಕಾಸು ಇಟ್ಟುಕೊಳ್ಳಬೇಕೆಂಬ ತುರ್ತೂ ಇಲ್ಲ. ಶೂನ್ಯ ಸಂಪಾದನೆಯಂತೆ ಶೂನ್ಯ ಮದುವೆಯೆಂದರೆ ಇದೇ ಇರಬಹುದು.



ಆಫ್ರಿಕಾದಲ್ಲಿ ಈ ಸಿನಿಮಾ ಪ್ರೊಜೆಕ್ಟರ್ ಆಕೃತಿಯಲ್ಲಿರುವ ಶವಪೆಟ್ಟಿಗೆಗೆ ಸಾವಿರಾರು ಡಾಲರ್ ಬೆಲೆ. ಅಲ್ಲಿ ಶವ ಸಂಸ್ಕಾರವೆಂದರೆ ದುಬಾರಿ ಬಾಬ್ತು. ಶವಪೆಟ್ಟಿಗೆಯಿಂದ ಹಿಡಿದು ಹಸುವಿನ ಮಾಂಸದ ಭಕ್ಷ್ಯದ ಊಟ ಹಾಕುವವರೆಗಿನ ಖರ್ಚು ಬಡ ಆಫ್ರಿಕಾ ನಾಗರಿಕನ ವರ್ಷದ ವೇತನಕ್ಕೆ ಸಮವಂತೆ. ಹೀಗಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಪ್ರಗತಿಯ ಹಿಂದೆ ಬಿದ್ದಿರುವ ವಿಮಾ ಕಂಪೆನಿಗಳು ಆಫ್ರಿಕಾದಲ್ಲಿ ಹೆಣದ ಬೆನ್ನು ಬಿದ್ದಿವೆ. ಶ್ರೀಮಂತ ದೇಶಗಳಲ್ಲಿ ಕಾರು, ಐಷಾರಾಮಿ ವಸ್ತುಗಳ ಮೇಲೆ ವಿಮೆ ನೀಡುವ ಈ ಕಂಪೆನಿಗಳು ಕಡಿಮೆ ಉಳಿತಾಯ, ಹೆಚ್ಚು ಸಾವಿನ ಸಂಖ್ಯೆ ಇರುವ ಆಫ್ರಿಕಾದಲ್ಲಿ ಅಂತಿಮ ಸಂಸ್ಕಾರಕ್ಕೂ ವಿಮೆ ನೀಡಲು ಆರಂಭಿಸಿವೆಯಂತೆ. ಮಾರಾಟಕ್ಕೆ ಉತ್ಪನ್ನ ಯಾವುದಾದರೇನು!



ಮದ್ಯ ಸೇವನೆಯಿಂದ ಕೆಲಸ ಮಾಡಲು ಹುಮ್ಮಸ್ಸು ಬರುತ್ತದಂತೆ. ಹೀಗಾಗಿ ಕುಡಿದು ಚಾಲನೆ ಮಾಡಿ ವಾಹನ ಅಪಘಾತ ಮಾಡಿದರೂ ಅದು ತಪ್ಪಲ್ಲ, ಆತನನ್ನು ಕೆಲಸದಿಂದ ತೆಗೆದು ಹಾಕಿದ ಕಂಪೆನಿಯದೇ ತಪ್ಪು ಎಂದು ಪೋರ್ತುಗಲ್‌ನ ಕೋರ್ಟೊಂದು ತೀರ್ಪು ನೀಡಿದೆಯಂತೆ. ತ್ಯಾಜ್ಯ ನಿರ್ವಹಣೆ ಕಂಪೆನಿಯ ಲಾರಿ ಚಾಲಕ ಕುಡಿದುಕೊಂಡು ಅಪಘಾತ ಮಾಡಿದ್ದಕ್ಕೆ ಕಂಪೆನಿ ಕೆಲಸದಿಂದ ತೆಗೆದು ಹಾಕಿದ್ದು, ಚಾಲಕ ಕೋರ್ಟ್‌ಗೆ ಹೋಗಿದ್ದ. ತ್ಯಾಜ್ಯ ಸಂಗ್ರಹಿಸುವುದು ಕಷ್ಟದ ಕೆಲಸ. ಕುಡಿದಾಗ ತ್ಯಾಜ್ಯದ ವಾಸನೆ ಬರುವುದಿಲ್ಲ. ಇನ್ನಷ್ಟು ಉತ್ಸಾಹದಿಂದ ಕಸ ಸಂಗ್ರಹಿಸಬಹುದಂತೆ. ಈ ತೀರ್ಪಿನಿಂದ ಕುಡಿದು ಕೆಲಸ ಮಾಡುವವರಿಗೆ ಇನ್ನಷ್ಟು ಕುಡಿಯಲು ಉತ್ಸಾಹ, ಉಲ್ಲಾಸ ಮೂಡಬಹುದು.